**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ ಬಂಡಾರಿ ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸರ್ಕಾರದ ಉತ್ತರ:**

**ವಿಷಯ:-** "ಮೆಡಿಕಲ್ ಕಾಲೇಜು: ಕುಗ್ಗದಿರಲಿ ಧ್ವನಿ! ಪುತ್ತೂರಿನಂತೆ ಕುಂದಾಪುರಕ್ಕೂ ಸಿಗಲಿ ಎಂಬ ಆಗ್ರಹ ಮಂಡನೆಗೆ ಸಕಾಲ? ಅಧಿವೇಶನದಲ್ಲಿ ದಾಖಲೆ ಸಹಿತ ಬೇಡಿಕೆ ಮಂಡಿಸಿದರೆ ಸಿಗುವುದು ಕಷ್ಟವಲ್ಲ." ಎಂಬ ಶೀರ್ಷಿಕೆಯಡಿ ದಿನಾಂಕ 07/12/2025ರ ಉದಯವಾಣಿ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಅತ್ತ ದಕ್ಷಿಣ ಕನ್ನಡದ ಪುತ್ತೂರಿನಲ್ಲಿ ಮೆಡಿಕಲ್ ಕಾಲೇಜು ಸ್ಥಾಪನೆಗೆ ಸರಕಾರ ಒಂದೊಂದೇ ಹೆಜ್ಜೆ ಮುಂದಿಡುತ್ತಿದ್ದಂತೆ ಇತ್ತ ಕುಂದಾಪುರ, ಬೈಂದೂರು ಭಾಗದ ಮೆಡಿಕಲ್ ಕಾಲೇಜು ಬೇಡಿಕೆ ಧ್ವನಿ ಕ್ಷೀಣವಾಗುತ್ತಾ ಸಾಗುತ್ತಿರುವುದು ಸಾರ್ವಜನಿಕರಿಗೆ ಬೇಸರ ಮೂಡಿಸಿದೆ.

ಪುತ್ತೂರು ಶಾಸಕರ ಬೇಡಿಕೆ, ಒತ್ತಡದಂತೆ ಸರಕಾರ ಬಜೆಟಿನಲ್ಲಿ ಮೆಡಿಕಲ್ ಕಾಲೇಜನ್ನು ಪುತ್ತೂರಿಗೆ ಘೋಷಿಸಿತ್ತು. ಈ ಹಿಂದೆಯೇ ಪಶುವೈದ್ಯಕೀಯ ಕಾಲೇಜನ್ನೂ ಪುತ್ತೂರಿಗೆ ಘೋಷಿಸಲಾಗಿತ್ತು. ಅದಿನ್ನೂ ಪೂರ್ಣ ಅನುಷ್ಠಾನವಾಗುವ ಮೊದಲೇ ಮೆಡಿಕಲ್ ಕಾಲೇಜು, 100 ಹಾಸಿಗೆಗಳ ಆಸ್ಪತ್ರೆ ಕೂಡಾ ಅನುದಾನ ಗಿಟ್ಟಿಸಿಕೊಂಡಿದೆ. ಆದ್ದರಿಂದ ಇನ್ನು ಕಾಲೇಜು ರಚನೆ ದಿನಗಳು ಹೆಚ್ಚು ದೂರ ಇಲ್ಲ

ಕುಂದಾಪುರದಲ್ಲಿ ಸುಸಜ್ಜಿತ ಸರಕಾರಿ ಆಸ್ಪತ್ರೆ ಇದೆ. ತಾಯಿ ಮಕ್ಕಳ ಆಸ್ಪತ್ರೆ ಇದೆ. ವೈದ್ಯಕೀಯ ವ್ಯವಸ್ಥೆ ಚೆನ್ನಾಗಿದ್ದು ಅತಿ ಹೆಚ್ಚು ಹೆರಿಗೆ ಆಗುವ ಆಸ್ಪತ್ರೆ ಎಂದು ಗುರುತಿಸಿಕೊಂಡಿದೆ. ಆದ್ದರಿಂದ ಕುಂದಾಪುರ ತಾಲೂಕಿನಲ್ಲಿ ಮೆಡಿಕಲ್ ಕಾಲೇಜು ಮಾಡಿದರೆ ಸರಕಾರಕ್ಕೆ ಸುಲಭ ಆಗಲಿದೆ. ಈಗಾಗಲೇ ಬೈಂದೂರು, ಹೆಬ್ರಿ, ಭಟ್ಕಳ, ಶಿರೂರು ಮೊದಲಾದೆಡೆಯಿಂದಲೂ ಕುಂದಾಪುರ ಸರಕಾರಿ ಆಸ್ಪತ್ರೆಗೆ ರೋಗಿಗಳು ಬರುತ್ತಾರೆ. ಇದು ಈ ಭಾಗದಲ್ಲಿ ಬೇರೆ ಸುಸಜ್ಜಿತ ಸರಕಾರಿ ಆಸ್ಪತ್ರೆಗಳಿಲ್ಲ ಎನ್ನುವುದಕ್ಕೆ ಉದಾಹರಣೆ. ಜತೆಗೆ ಉತ್ತರ ಕನ್ನಡದಿಂದಲೂ ಇಲ್ಲಿಗೆ ಚಿಕಿತ್ಸೆಗೆ ಆಗಮಿಸುವವರು ಇದ್ದಾರೆ. ಕುಂದಾಪುರವು ಜಿಲ್ಲಾ ಉಪವಿಭಾಗ ಕೇಂದ್ರವಾದ ಕಾರಣ ದ.ಕ. ಜಿಲ್ಲೆಯ ಉಪವಿಭಾಗ ಕೇಂದ್ರ ಪುತ್ತೂರಿಗೆ ಮಂಜೂರಾದಂತೆ ಇಲ್ಲಿಗೂ ಇರಲಿ ಎಂಬ ಬೇಡಿಕೆ ನ್ಯಾಯಸಮ್ಮತವಾಗಿದೆ.

ಕುಂದಾಪುರದಲ್ಲಿ ಸುಸಜ್ಜಿತ ಆಸ್ಪತ್ರೆ ಇರುವ ಕಾರಣ ಬೈಂದೂರಿನಲ್ಲಿ ಮೆಡಿಕಲ್ ಕಾಲೇಜು ಬೇಕು ಎಂಬ ಬೇಡಿಕೆಯೂ ಇದೆ. ಈ ಹಿಂದೆ ಉದಯವಾಣಿ ಸುದಿನ ವರದಿ ಮಾಡಿದ್ದಾಗ ಅದನ್ನು ಆಧರಿಸಿ ಶಾಸಕರಾದ ಮಂಜುನಾಥ್ ಭಂಡಾರಿ ಸರಕಾರಕ್ಕೆ ಪತ್ರ ಬರೆದು ಒತ್ತಾಯಿಸಿದ್ದರೂ ಈವರೆಗೆ ಈ ವಿಷಯದಲ್ಲಿ ಏನೂ ಪ್ರಗತಿಯಾಗಿರುವುದಿಲ್ಲ.

ರಾಜ್ಯ ವಿಧಾನಮಂಡಲದ ಅಧಿವೇಶನ ಆರಂಭವಾಗಿದ್ದು, ಕುಂದಾಪುರ, ಬೈಂದೂರು ಭಾಗದ ಜನಪ್ರತಿನಿಧಿಗಳು ಮೆಡಿಕಲ್ ಕಾಲೇಜಿಗೆ ಜತೆಯಾಗಿ ಧ್ವನಿ ಎತ್ತಲು ಈಗ ಸರಿಯಾದ ಕಾಲ. ಮೆಡಿಕಲ್ ಕಾಲೇಜು, ಆಸ್ಪತ್ರೆಗೆ ಈ ಅಧಿವೇಶನದಲ್ಲಿ ಸ್ಪಷ್ಟವಾದ ಆಗ್ರಹವನ್ನು ಸರಿಯಾದ ಅಂಕಿ ಅಂಶಗಳೊಂದಿಗೆ ಮಂಡಿಸಿದರೆ ಮುಂದಿನ ಬಜೆಟ್ ವೇಳೆಗಾದರೂ ಸರಕಾರ ಸ್ಪಂದಿಸುವ

ಸಾಧ್ಯತೆಗಳಿವೆ ಎಂದು ವರದಿಯಾಗಿರುತ್ತದೆ. ಆದ್ದರಿಂದ ಜಿಲ್ಲೆಯ ಬಡಜನರ ಆರೋಗ್ಯದ ಹಿತದೃಷ್ಟಿಯಿಂದ ಜಿಲ್ಲೆಗೊಂದು ಮೆಡಿಕಲ್ ಕಾಲೇಜು ಎಂಬ ಸರ್ಕಾರದ ನೀತಿಯಂತೆ ಯಾವುದೇ ಸರ್ಕಾರಿ ಮೆಡಿಕಲ್ ಕಾಲೇಜು ಹೊಂದಿರದ ಉಡುಪಿ ಜಿಲ್ಲೆಯ ಕುಂದಾಪುರ-ಬೈಂದೂರು ಭಾಗದಲ್ಲಿ ಮೆಡಿಕಲ್ ಕಾಲೇಜು ಸ್ಥಾಪನೆಗಾಗಿ ಮುಂದಿನ ಬಜೆಟ್‌ನಲ್ಲಿ ಅನುದಾನ ಕಾಯ್ದಿರಿಸಲು ಕ್ರಮಕೈಗೊಳ್ಳಬೇಕಾಗಿ ಒತ್ತಾಯಿಸುತ್ತೇನೆ.

**.ಉತ್ತರ :-**

ರಾಜ್ಯದಲ್ಲಿ ಪ್ರಸ್ತುತ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಬಳ್ಳಾರಿ, ಬೀದರ್, ರಾಯಚೂರು, ಬೆಳಗಾವಿ, ಶಿವಮೊಗ್ಗ, ಹಾಸನ, ಮಂಡ್ಯ, ಚಾಮರಾಜನಗರ, ಕೊಡಗು, ಕಲಬುರಗಿ, ಕೊಪ್ಪಳ, ಗದಗ, ಕಾರವಾರ, ಚಿಕ್ಕಬಳ್ಳಾಪುರ, ಹಾವೇರಿ, ಯಾದಗಿರಿ, ಚಿಕ್ಕಮಗಳೂರು ಚಿತ್ರದುರ್ಗ, ಜಿಲ್ಲೆಗಳಲ್ಲಿ ಸರ್ಕಾರಿ ಸ್ವಾಯತ್ತ ವೈದ್ಯಕೀಯ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.

ರಾಮನಗರ, ಕನಕಪುರ ಮತ್ತು ಬಾಗಲಕೋಟೆಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅನುದಾನದಿಂದ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ರಾಜ್ಯದ ಪ್ರತಿ ಜಿಲ್ಲೆಗೊಂದು ಸರ್ಕಾರಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಬೇಕೆಂಬುದು ಸರ್ಕಾರದ ನೀತಿಯಾಗಿರುತ್ತದೆ.

ರಾಜ್ಯ ಸರ್ಕಾರದ ವತಿಯಿಂದ ಹೊಸ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಲು ಅಂದಾಜು ರೂ.610.00ಕೋಟಿಗಳ ಅನಾವರ್ತಕ ವೆಚ್ಚ ಹಾಗೂ 60.00ಕೋಟಿಗಳ ಆವರ್ತಕ ವೆಚ್ಚದ ಅವಶ್ಯಕತೆ ಇರುತ್ತದೆ. ಅದರಂತೆ, ಅನುದಾನದ ಲಭ್ಯತೆಯನ್ನು ಆಧರಿಸಿ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಹೊಂದಿರದ ಜಿಲ್ಲೆಗಳಲ್ಲಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಕ್ರಮವಹಿಸಲಾಗುವುದು.

ವೈದ್ಯಕೀಯ ಕಾಲೇಜುಗಳು ಇಲ್ಲದ ಜಿಲ್ಲೆಗಳಲ್ಲಿ ಪಿಪಿಪಿ ಮಾದರಿಯಲ್ಲಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರದಿಂದ ಪೂರ್ವಭಾವಿ ಸಭೆ ನಡೆಸಲಾಗಿದ್ದು, iDECK ಸಂಸ್ಥೆಯನ್ನು Transaction Advisor ಆಗಿ ನೇಮಿಸಲಾಗಿದೆ.

ಈಗಾಗಲೇ ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ ವೈದ್ಯಕೀಯ ಕಾಲೇಜು ಕಾರ್ಯನಿರ್ವಹಿಸುತ್ತಿದೆ. ಉಡುಪಿ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜು ಸ್ಥಾಪಿಸುವ ಪ್ರಸ್ತಾವನೆ ಪ್ರಸ್ತುತದಲ್ಲಿ ಸರ್ಕಾರದ ಹಂತದಲ್ಲಿ ಬಾಕಿ ಇರುವುದಿಲ್ಲ.

ಸಂಖ್ಯೆ:ಎಂಇಡಿ 640 ಎಂಎಂಸಿ 2025

**(ಡಾ. ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.